ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ    ದಿನಾಂಕ : DATE : 25/11/20

## ಚುನಾವಣೆ ರೀತಿ ಕೆಲಸ ಮಾಡೋಣ । ಕರೊನಾವನ್ನು ಗೆಲ್ಲೋಣ
## ಸೋಂಕು ಹೆಚ್ಚಿರುವ ಕರ್ನಾಟಕ ಸೇರಿ 8 ರಾಜ್ಯಗಳಿಗೆ ಪ್ರಧಾನಿ ಕರೆ

# ಪ್ರತಿ ಪ್ರಜೆಗೂ ಲಸಿಕೆ ನಿಶ್ಚಿತ

ವಿ.ವಾ. 25-11-20

**ನವದೆಹಲಿ:** ವಿಶ್ವಾದ್ಯಂತ ಮರಣಮೃದಂಗ ಬಾರಿಸುತ್ತಿರುವ ಕರೊನಾ ಮಹಾಮಾರಿಯನ್ನು ಭಾರತ ಮಟ್ಟ ಹಾಕುವುದು ನಿಶ್ಚಿತ ಎಂದಿರುವ ಪ್ರಧಾನಿ ನರೇಂದ್ರ ಮೋದಿ, ದೇಶದ ಪ್ರತಿ ಪ್ರಜೆಗೂ ಲಸಿಕೆ ವಿತರಿಸುವ ಗುರಿ ಈಡೇರಲು ಎಲ್ಲ ರಾಜ್ಯಗಳು ಚುನಾವಣೆ ರೀತಿ ಸಜ್ಜಾಗಬೇಕೆಂದು ಕರೆ ನೀಡಿದ್ದಾರೆ.

ಕರೊನಾದಿಂದ ಅತಿ ಹೆಚ್ಚು ಬಾಧಿತವಾಗಿರುವ ಪ್ರಮುಖ 8 ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಂಗಳವಾರ ವಿಡಿಯೋ ಸಂವಾದ ನಡೆಸಿದ ಮೋದಿ ಪಾಸಿಟಿವ್ ಪ್ರಮಾಣವನ್ನು ಶೇ.5ಕ್ಕಿಂತ ಕೆಳಗಿಳಿಸಿದರಷ್ಟೇ ಕರೊನಾ ವಿರುದ್ಧ ಗೆಲುವು ಸಾಧ್ಯ ಎಂದರು.

» **ಪಾಸಿಟಿವ್ ಪ್ರಮಾಣ ಶೇ.5ಕ್ಕಿಂತ ಕೆಳಗಿಳಿಸಲು ಸೂಚನೆ**

» **ಶೀಘ್ರದಲ್ಲೇ ಜಿಲ್ಲಾ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚನೆ**

ದೇಶದ ಪ್ರತಿಯೊಬ್ಬರಿಗೂ ಲಸಿಕೆ ವಿತರಿಸುವುದು ಸರ್ಕಾರದ ಆದ್ಯತೆಯಾಗಿದೆ. ಈ ಅಭಿಯಾನವು ಬೃಹತ್ ಹಾಗೂ ದೀರ್ಘಕಾಲದ್ದಾಗಿರುತ್ತದೆ. ಈ ಕಾರ್ಯಕ್ಕೆ ಎಲ್ಲ ರಾಜ್ಯಗಳು ಸಜ್ಜಾದರೆ ನಾವೆಲ್ಲ ಒಂದು ತಂಡವಾಗಿ ಕೆಲಸ ಮಾಡಬಹುದೆಂದು ಮೋದಿ ಕರೆ ನೀಡಿದರು. ಇದಕ್ಕೂ ಮೊದಲು ಆಯಾ ರಾಜ್ಯಗಳ ಪ್ರತಿನಿಧಿಗಳಿಂದ ಕರೊನಾ ಸ್ಥಿತಿಗತಿಯ ಮಾಹಿತಿ ಪಡೆದ ಅವರು, ಸೋಂಕು ಪಸರಿಸುವಿಕೆ ತಡೆಯುವುದು, ಲಸಿಕೆ ವಿತರಣೆ ಸೇರಿ ಹಲವು ಪ್ರಮುಖ ವಿಷಯಗಳ ಕುರಿತು ಚರ್ಚಿಸಿದರು.

**9ನೇ ಸಂವಾದ:** ಕರೊನಾ ಬಿಕ್ಕಟ್ಟಿನ ಕುರಿತು ಕಳೆದ ಮಾ.20ರಿಂದ ಇಂದಿನವರೆಗೆ ಮುಖ್ಯಮಂತ್ರಿಗಳ ಜತೆಗೆ ಪ್ರಧಾನಿ 9 ಬಾರಿ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ, ಆರೋಗ್ಯ ಸಚಿವ ಡಾ. ಹರ್ಷವರ್ಧನ್, ಮಹಾರಾಷ್ಟ್ರ, ಕೇರಳ, ದೆಹಲಿ, ಪಶ್ಚಿಮ ಬಂಗಾಳ, ಕರ್ನಾಟಕ, ಉತ್ತರಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದ ಮುಖ್ಯಮಂತ್ರಿಗಳು ಹಾಗೂ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಪುಟ 4

ವಿಜಯವಾಣಿ



ಪ್ರಧಾನಿ ಜತೆಗಿನ ಸಂವಾದದಲ್ಲಿ ಸಿಎಂ ಯಡಿಯೂರಪ್ಪ, ಸಚಿವ ಆರ್.ಅಶೋಕ್

### ಮೊದಲ ಹಂತ

ಒಂದು ಕೋಟಿ ಆರೋಗ್ಯ ಕಾರ್ಯಕರ್ತರು, 2 ಕೋಟಿ ಕರೊನಾ ವಾರಿಯರ್ಸ್ ಮತ್ತು 50 ವರ್ಷದ ದಾಟಿದ 26 ಕೋಟಿ ಜನರಿಗೆ ಮೊದಲ ಹಂತದಲ್ಲಿ ಲಸಿಕೆ ವಿತರಣೆ.

## ರಾಜ್ಯಗಳಿಗೆ ಮೋದಿ ಸಲಹೆ, ಸೂಚನೆ



**ಸೋಂಕಿತರಿಗೆ** ಆಮ್ಲಜನಕ, ವೆಂಟಿಲೇಟರ್ ಸಕಾಲಕ್ಕೆ ದೊರೆಯುವಂತೆ ಮಾಡಲು ಹೆಚ್ಚು ಗಮನ ವಹಿಸಲಾಗಿದೆ. ಇದಕ್ಕಾಗಿ ಪಿಎಂ-ಕೇರ್ಸ್ ನಿಧಿಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಆಮ್ಲಜನಕ ವಿಚಾರದಲ್ಲಿ ಮೆಡಿಕಲ್ ಕಾಲೇಜು ಮತ್ತು ಜಿಲ್ಲಾಸ್ಪತ್ರೆಗಳು ಸ್ವಾವಲಂಬಿಯನ್ನಾಗಿಸಲು ಪ್ರಯತ್ನಿಸುತ್ತಿದ್ದೇವೆ. ದೇಶದಲ್ಲಿ 160 ಆಕ್ಸಿಜನ್ ಜನರೇಷನ್ ಪ್ಲಾಂಟ್ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ ಎಂದು ಮೋದಿ ತಿಳಿಸಿದರು.

- ಚುನಾವಣೆ ಬೂತ್ ಮಾದರಿ ಲಸಿಕೆ ಕೇಂದ್ರ ರಚನೆ
- ಲಸಿಕೆ ಸಂಗ್ರಹಕ್ಕೆ ಅಗತ್ಯವಾದ ಮೂಲ ಸೌಕರ್ಯ ಸಿದ್ಧಪಡಿಸಿಕೊಳ್ಳುವುದು
- ಆರೋಗ್ಯ ಕಾರ್ಯಕರ್ತರು, ಹಿರಿಯರಿಗೆ ಮೊದಲ ಆದ್ಯತೆ
- ಲಸಿಕೆ ಕೊಟ್ಟ ಬಳಿಕ ಟ್ರ್ಯಾಕ್ ರಿಪೋರ್ಟ್ ಸಂಗ್ರಹ
- ಲಸಿಕೆ, ಕರೊನಾ ತಡೆಗೆ ಯಾವುದೇ ಸಲಹೆ ಸೂಚನೆ ಇದ್ದರೆ ರಾಜ್ಯಗಳು ಹಂಚಿಕೊಳ್ಳಬಹುದು.

## ಸೋಂಕು ಪರೀಕ್ಷೆ ಹೆಚ್ಚಿಸಿ

ಆರ್‌ಟಿ-ಪಿಸಿಆರ್ ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಿ, ಪಾಸಿಟಿವಿಟಿ ದರ ಇಳಿಸಿ ಎಂದು ಸೋಂಕು ಹೆಚ್ಚಳ ಕಾಣುತ್ತಿರುವ ರಾಜ್ಯಗಳಿಗೆ ಮೋದಿ ಸೂಚಿಸಿದರು. ಸೋಂಕಿತರ ಚೇತರಿಕೆ ಮತ್ತು ಮರಣ ಪ್ರಮಾಣದಲ್ಲಿ ಭಾರತವು ಇತರ ದೇಶಗಳಿಗಿಂತ ಉತ್ತಮವಾಗಿದೆ. ಆದಾಗ್ಯೂ ಸಕಾರಾತ್ಮಕ ದರವನ್ನು ಸುಮಾರು ಶೇ.5 ಕ್ಕೆ ಮತ್ತು ಸಾವಿನ ಪ್ರಮಾಣವನ್ನು ಶೇ.1ಕ್ಕಿಂತ ಕಡಿಮೆಗೊಳಿಸುವಲ್ಲಿ ರಾಜ್ಯಗಳು ಕೆಲಸ ಮಾಡಬೇಕೆಂದು ಪ್ರಧಾನಿ ಕರೆ ನೀಡಿದರು.

## ಲಸಿಕೆಗೆ ಕರ್ನಾಟಕದಲ್ಲಿ 3 ಸಮಿತಿ



**ಬೆಂಗಳೂರು:** ಪ್ರಧಾನಿ ಸೂಚನೆ ಹಿನ್ನೆಲೆಯಲ್ಲಿ ಕರೊನಾ ಲಸಿಕೆ ವಿತರಣೆ ಸಂಬಂಧ ರಾಜ್ಯದಲ್ಲಿ ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಚಾಲನಾ ಸಮಿತಿಗಳ ರಚನೆಗೆ ನಿರ್ಧರಿಸಲಾಗಿದೆ. ಲಸಿಕೆ ಹಂಚಿಕೆಗೆ ಚುನಾವಣಾ ಬೂತ್‌ಗಳ ಮಾದರಿಯಲ್ಲಿ ಬೂತ್‌ಗಳನ್ನು ರಚನೆ ಮಾಡಲಾಗುತ್ತಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು. ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಜತೆಗಿನ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಕರೊನಾ ಲಸಿಕೆ ಕೊಟ್ಟ ಬಳಿಕ ಪ್ರಧಾನಿ ಸೂಚನೆ ಹಿನ್ನೆಲೆಯಲ್ಲಿ ಟ್ರ್ಯಾಕ್ ರಿಪೋರ್ಟ್ ಸಂಗ್ರಹಕ್ಕೂ ಸೂಚಿಸಲಾಗುತ್ತದೆ ಎಂದರು.

ಪುಟ 4

## ಟಾಸ್ಕ್‌ಫೋರ್ಸ್ ರಚನೆ

ಲಸಿಕೆ ವಿತರಣೆಗಾಗಿ ರಾಜ್ಯಗಳು ಜಿಲ್ಲಾ ಅಥವಾ ಬ್ಲಾಕ್ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚಿಸಬೇಕು. ನಾಗರಿಕರಿಗೆ ವಿತರಿಸುವ ಮುನ್ನ ಲಸಿಕೆ ಅಗತ್ಯವಿರುವ ಎಲ್ಲ ವೈಜ್ಞಾನಿಕ ಮಾನದಂಡ ಪೂರೈಸುತ್ತದೆ ಎಂದು ಖಚಿತ ಪಡಿಸಿಕೊಳ್ಳಲಾಗುತ್ತದೆ. ಲಸಿಕೆಗಳ ಬಗ್ಗೆ ಭಾರತಕ್ಕಿರುವ ಅನುಭವ ಇತರ ದೊಡ್ಡ ದೇಶಗಳಿಗಿಲ್ಲ. ಭಾರತವು ಯಾವುದೇ ಲಸಿಕೆಯನ್ನು ತನ್ನ ನಾಗರಿಕರಿಗೆ ನೀಡಲಿ, ಅದು ವೈಜ್ಞಾನಿಕ ಮಾನದಂಡಗಳೊಂದಿಗೆ ತುಂಬಾ ಸುರಕ್ಷಿತವಾಗಿರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

# ಪ್ರತಿ ಪ್ರಜೆಗೂ ಲಸಿಕೆ ನಿಶ್ಚಿತ

ವಿ.ವಾ - 25-11-20

**ಮೊದಲನೇ ಪುಟದಿಂದ...**

**ಗಮನಿಸಲಿದೆ ಕೇಂದ್ರ:** ರಾಜ್ಯಗಳೊಂದಿಗಿನ
ಸಾಮೂಹಿಕ ಸಮನ್ವಯದೊಂದಿಗೆ ಲಸಿಕೆ ವಿತರಣಾ
ಕಾರ್ಯತಂತ್ರ ನಡೆಯಲಿದೆ. ಕೋಲ್ಡ್ ಸ್ಟೋರೇಜ್
ವ್ಯವಸ್ಥೆ ಬಗ್ಗೆ ರಾಜ್ಯಗಳೂ ತಕ್ಷಣದಿಂದ ಕೆಲಸ
ಪ್ರಾರಂಭಿಸಿ ತಮ್ಮ ಯೋಜನೆಗಳನ್ನು ಕೇಂದ್ರದ
ಮುಂದಿಡಬೇಕು. ಲಸಿಕೆ ಅಭಿ
ವೃದ್ಧಿ ಕುರಿತಾದ ಪ್ರತಿ ಬೆಳವಣಿಗೆ
ಯನ್ನು ಕೇಂದ್ರ ಸರ್ಕಾರ ಸೂಕ್ಷ್ಮ
ವಾಗಿ ಗಮನಿಸುತ್ತಿದೆ. ದೇಶಿಯ
ವಾಗಿ ಲಸಿಕೆ ಅಭಿವೃದ್ಧಿಪಡಿಸು ವವರು ಮತ್ತು
ತಯಾರಕರ ಜತೆ ಸಂಪರ್ಕ ದಲ್ಲಿದ್ದೇವೆ.
ಜಾಗತಿಕ ನಿಯಂತ್ರಕರು, ಇತರ ದೇಶ
ಗಳ ಸರ್ಕಾರಗಳು, ಬಹುರಾಷ್ಟ್ರೀಯ ಸಂಸ್ಥೆಗಳು
ಮತ್ತು ಅಂತಾರಾಷ್ಟ್ರೀಯ ಕಂಪನಿಗಳ ಜತೆಯಲ್ಲೂ
ಮಾತುಕತೆ ನಡೆಸುತ್ತಿದ್ದೇವೆ. ಲಸಿಕೆ ಎಷ್ಟು ಡೋಸ್
ಇರಲಿದೆ ಹಾಗೂ ಅದರ ಬೆಲೆ ಎಷ್ಟು ಎಂದು ಇನ್ನೂ
ನಿರ್ಧರಿಸಲಾಗಿಲ್ಲ. ಸದ್ಯಕ್ಕೆ ಈ ಪ್ರಶ್ನೆಗಳಿಗೆ ನಮ್ಮಲ್ಲಿ
ಉತ್ತರಗಳಿಲ್ಲ ಎಂದು ಮೋದಿ ಹೇಳಿದರು.

» **ಪ್ರತಿ ಬೆಳವಣಿಗೆ ಬಗ್ಗೆ ನಿಗಾ**

## ಕರ್ನಾಟಕದಲ್ಲಿ 3 ಸಮಿತಿ

**ಮೊದಲನೇ ಪುಟದಿಂದ...**

ಸಭೆಯಲ್ಲಿ ಭಾಗವಹಿಸಿದ್ದ ನೀತಿ ಆಯೋಗದ
ಸದಸ್ಯ ಡಾ.ವಿ.ಕೆ.ಪೌಲ್ ಮಾತನಾಡಿ ಯಾವ್ಯಾವ
ದೇಶಗಳಲ್ಲಿ ಲಸಿಕೆ ತಯಾರಿ ಸ್ಥಿತಿ ಯಾವ ಹಂತ
ದಲ್ಲಿದೆ ಎಂಬುದರ ಬಗ್ಗೆ ಮಾಹಿತಿ ನೀಡಿದರು.
ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಲಸಿಕೆ ತಯಾರಿಕೆ
ವಿವಿಧ ಹಂತಗಳಲ್ಲಿವೆ. 50 ಕ್ಲಿನಿಕಲ್ ರೀಸರ್ಚ್
ನಲ್ಲಿದ್ದು, 25 ಮುಂದುವರಿದ ಟ್ರಯಲ್‌ನಲ್ಲಿವೆ.
ಭಾರತದಲ್ಲೇ 5 ಲಸಿಕೆಗಳ ಕ್ಲಿನಿಕಲ್ ಟ್ರಯಲ್
ನಡೆದಿವೆ. ದೇಶದಲ್ಲಿ 24 ಕಂಪನಿಗಳು ಲಸಿಕೆಗಳನ್ನು
ತಯಾರಿಸುವ ಸಾಮರ್ಥ್ಯವನ್ನು ಹೊಂದಿವೆ
ಎಂಬ ವಿವರಿಸಿದರು. ಮುಖ್ಯಮಂತ್ರಿ ಬಿ.ಎಸ್.
ಯಡಿಯೂರಪ್ಪ, ಕಂದಾಯ ಸಚಿವ ಆರ್.
ಅಶೋಕ್, ಸಮಾಜ ಕಲ್ಯಾಣ ಸಚಿವ
ಶ್ರೀರಾಮುಲು, ಮುಖ್ಯಕಾರ್ಯದರ್ಶಿ ವಿಜಯ
ಭಾಸ್ಕರ್ ಸೇರಿ ಹಿರಿಯ ಅಧಿಕಾರಿಗಳು
ವಿಡಿಯೋ ಸಂವಾದದಲ್ಲಿದ್ದರು.